ಹುಣಸೂರು ಜಿಲ್ಲಾ ಪಂಚಾಯ್ತಿ ಇಂಜನಿಯರಿಂಗ್ ವಿಭಾಗಕ್ಕೆ ಕಂಪ್ಯೂಟರ್ ಅಳವಡಿಕೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1154(1088)

ಮಾನ್ಯ ಸದಸ್ಯರ ಹೆಸರು: ಶ್ರೀ ವಿ.ಪಾಪಣ್ಣ(ಹುಣಸೂರು)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ(ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಪ್ರಶ್ನೆ

1) ಹುಣಸೂರು ತಾಲ್ಲೂಕಿನಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರ, ಜಿಲ್ಲಾ ಪಂಚಾಯತ್ ತಾಂತ್ರಿಕ ಉಪ ವಿಭಾಗದಲ್ಲಿ 2.5 ಕೋಟಿ ರೂ.ಗಿಂತ ಅಧಿಕ ವೆಚ್ಚದ ಕೆಲಸ ಕಾರ್ಯನಡೆಯುತ್ತಿದ್ದು, ದೊಡ್ಡ ಸಿಬ್ಬಂದಿ ವರ್ಗವಿದ್ದರೂ ಇದಕ್ಕೆ ಅಗತ್ಯವಾದ ಬೆರಳಚ್ಚುಗಾರರ ಹುದ್ದೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಈ ಕಛೇರಿಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು, ಜೂನಿಯರ್ ಅಭಿಯಂತರರು, ವಿವಿಧ ಯೋಜನೆಗಳಡಿ ಕಾಮಗಾರಿ ಹಂಚಿಕೆ ಹಾಗೂ ಅಂದಾಜು ಪತ್ರ ಮತ್ತು ನಕಾಶೆಯನ್ನು ತಯಾರಿಸಲು ಅನುಕೂಲವಾಗುವಂತೆ ಕಂಪ್ಯೂಟರ್‌ನ್ನು ಅಳವಡಿಸಲು ಇರುವ ತೊಂದರೆ ಏನು?

ಉತ್ತರ

1) ಮಂಜೂರಾದ ಬೆರಳಚ್ಚುಗಾರರ ಹುದ್ದೆ ಇರುವುದಿಲ್ಲ.

2) ಕಂಪ್ಯೂಟರ್ ಅಳವಡಿಸುವ ಬಗ್ಗೆ ಪರಿಶೀಲಿಸಲಾಗುವುದು.

ಡಾ॥ ರಾಜಾರಾಮಣ್ಣ ವರದಿಯನುಸಾರ ಪ್ರಾಥಮಿಕ ಶಾಲೆಗೆ ಪದವೀಧರರ ನೇಮಕ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1155(1089)

ಸದಸ್ಯರ ಹೆಸರು: ಶ್ರೀ ಪಾಪಣ್ಣ.ವಿ(ಹುಣಸೂರು)

ಉತ್ತರಿಸುವ ಸಚಿವರು: ಶ್ರೀ ಹೆಚ್.ವಿಶ್ವನಾಥ್(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಪ್ರಶ್ನೆ

ಅ. ಶಿಕ್ಷಣ ಇಲಾಖೆಯ ಸುಧಾರಣೆಗೆ ಡಾ: ರಾಜಾರಾಮಣ್ಣ ನೀಡಿರುವ ವರದಿಯಂತೆ ಪ್ರಾಥಮಿಕ ಶಾಲಾ ಶಿಕ್ಷಕರನ್ನಾಗಿ ಪದವೀಧರ ಬಿ.ಇಡಿ. ಅಭ್ಯರ್ಥಿಗಳನ್ನು ನೇಮಕ ಮಾಡಲು ಸರ್ಕಾರವು ಪರಿಶೀಲಿಸಿದೆಯೇ?

ಆ. ಮೌಲ್ಯಯುಕ್ತ ಶಿಕ್ಷಣಕ್ಕಾಗಿ ಪದವೀಧರ ಶಿಕ್ಷಕರನ್ನು ಪ್ರಾಥಮಿಕ ಶಾಲೆಗೆ ಶಿಕ್ಷಕರನ್ನಾಗಿ ನೇಮಿಸಿಕೊಳ್ಳುವುದು ಉತ್ತಮವೆಂದು ಸರ್ಕಾರ ಭಾವಿಸಿದೆಯೇ?

ಇ. ವರದಿಯಲ್ಲಿ ನೀಡಿರುವ ಪ್ರಸ್ತಾಪಿತ ಈ ಅಂಶದ ಬಗ್ಗೆ ಸರ್ಕಾರ ಯಾವ ನಿರ್ಧಾರ ಕೈಗೊಂಡಿದೆ?

ಈ. ಶಿಕ್ಷಣ ಇಲಾಖೆಯಲ್ಲಿ ಉತ್ತಮ ಅಧಿಕಾರಿಗಳ ಕೊರತೆ ನೀಗಿಸಲು ಶೈಕ್ಷಣಿಕ ಪರಿವರ್ತನೆಯ ದೃಷ್ಟಿಯಿಂದ ನೇರ ನೇಮಕಾತಿ ಮೂಲಕ (ಕೆ.ಇ.ಎಸ್.) ಮುಖ್ಯ ಶಿಕ್ಷಕರನ್ನು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಭರ್ತಿ ಮಾಡಿಕೊಳ್ಳುವ ಕುರಿತಂತೆ ಪ್ರಕ್ರಿಯೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಉತ್ತರ

ಅ. ಆ. ಮತ್ತು ಇ. ಪರಿಶೀಲನೆಯಲ್ಲಿದೆ.

ಈ. ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ತಿದ್ದುಪಡಿಯಾದನಂತರ ನೇರನೇಮಕಾತಿ ಮಾಡಿಕೊಳ್ಳಲಾಗುವುದು.

ಜಿಲ್ಲಾ ಯೋಜನಾ ಮಂಡಳಿಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1157(1405)

ಸದಸ್ಯರ ಹೆಸರು: ಶ್ರೀ ಪಾಟೀಲ್.ಡಿ.ಆರ್(ಗದಗ್)

ಉತ್ತರಿಸುವವರು: ಶ್ರೀ ಎಂ.ವೈ.ಘೋರ್ಪಡೆ(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)